ಫ್ಯಾಕ್ಸ್ : 080 – 2202 8041

ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

ಸಂಖ್ಯೆ : ವಾಇ : ಉ ನಿ : ಸುಮಪ : 2015–16 :

ಅಕ್ಟೋಬರ್ 21, 2015

## ದಸರಾ : ರಾಜ್ಯದ ಜನತೆಗೆ ಮುಖ್ಯಮಂತ್ರಿ ಶುಭಾಶಯ




**ಬೆಂಗಳೂರು, ಅಕ್ಟೋಬರ್ 21 :**

ನಾಡಹಬ್ಬ ದಸರಾ ಶುಭ ಸಂದರ್ಭದಲ್ಲಿ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯ ಅವರು ರಾಜ್ಯದ ಜನತೆಗೆ ಶುಭ ಹಾರೈಸಿದ್ದಾರೆ.

ದಸರಾದ ಹತ್ತು ದಿನಗಳೂ ವಿಶೇಷವೇ ಅದರಲ್ಲಿ ಆಯುಧ ಪೂಜೆ ಹಾಗೂ ವಿಜಯ ದಶಮಿ ವಿಶೇಷತೆಯಲ್ಲಿ ವಿಶೇಷ.

ಆಯುಧ ಪೂಜೆಯ ದಿನದಂದು ಅನ್ನದಾತನ ನೇಗಿಲು ಹಾಗೂ ಕುಡುಗೋಲು, ಟ್ರ್ಯಾಕ್ಟರ್ ಮತ್ತು ಲಾರಿ ಒಳಗೊಂಡಂತೆ ಎಲ್ಲಾ ವಾಹನಗಳಿಗೂ ಅಲಂಕಾರ ಮತ್ತು ಪೂಜೆ. *ದುಷ್ಟ ಶಿಕ್ಷಣ, ಶಿಷ್ಟ ರಕ್ಷಣ* ಎಂಬುದರ ಸಂಕೇತವಾದ ವಿಜಯ ದಶಮಿಯ ದಿನದಂದು ಶಿಲಾನ್ಯಾಸಗಳು ಮತ್ತು ಉದ್ಘಾಟನೆಗಳು ಹಾಗೂ ವ್ಯಾಪಾರ ಮತ್ತು ವಹಿವಾಟುಗಳು ಹೀಗೆ ಎಲ್ಲಾ ಶುಭಾರಂಭಗಳಿಗೂ ಪ್ರೇರಣೆ ಮತ್ತು ಚಾಲನೆ. ಇದು ನಮ್ಮ ಪರಂಪರೆ ಮತ್ತು ಸಂಪ್ರದಾಯ.

*ನವರಾತ್ರಿಯ ಸುಸಂದರ್ಭದಲ್ಲಿ, ರಾಜ್ಯವು ಅಭಿವೃದ್ಧಿಯತ್ತ ಪಯಣಿಸಲಿ. ಸಮೃದ್ಧಿಯತ್ತ ಸಾಗಲಿ. ರಾಜ್ಯದ ಎಲ್ಲರಿಗೂ ಸುಖ–ಶಾಂತಿ ಹಾಗೂ ನೆಮ್ಮದಿ ಲಭಿಸಲಿ. ರಾಜ್ಯದಲ್ಲಿ ಬರದ ಛಾಯೆ ಮಾಯವಾಗಲಿ. ಅನ್ನದಾತನ ಬೆಳೆಗೆ ನ್ಯಾಯಯುತ ಬೆಲೆ ದೊರೆಯಲಿ. ರೈತರ ಬಾಳು ಹಸನಾಗಲಿ ಎಂಬುದೇ*

***ಕನ್ನಡ ನಾಡಿನ ಅಧಿದೇವತೆ ತಾಯಿ ಶ್ರೀ ಚಾಮುಂಡೇಶ್ವರಿಯಲ್ಲಿ ನನ್ನ ಪ್ರಾರ್ಥನೆ*** **ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಸಂದೇಶದಲ್ಲಿ ತಿಳಿಸಿದ್ದಾರೆ.**

***********

**ಡಿ ಪಿ ಎಂ**